**ಎಸ್.ಸಿ. 36/2014**

**ದೋ.ಸಾ. : 57 ಪ್ರಾ.ಸಾ. :44**

ಸಾಕ್ಷಿಯ ಹೆಸರು : ಅರುಣ್ ಕುಮಾರ್ ಕೊಳೂರ

**ದಿನಾಂಕಃ 13-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

1. ಅದೇ ದಿನ ಸಾಕ್ಷಿದಾರರಾದ ಚಾಸಾ-23, 24, 26 ರಿಂದ 30 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಚಾಸಾ-23 ರವರು ವೇಲುವಿನ ಮನೆಯಲ್ಲಿ ಅಶ್ವಿನಿಯ ಕೊಲೆಯಾಗಿರುವ ಹಾಗೂ ಜಾನಕಿಯ ಮೇಲೆ ಮಾರಣಾಂತಿಕವಾಗಿ ಹಲ್ಲೆಯಾಗಿರುವ ಬಗ್ಗೆ ಹಾಗೂ ವೇಲು ಮತ್ತು ಆತನ ಮಗನ ಶವವನ್ನು ನೋಡಿದ ಬಗ್ಗೆ ಚಾಸಾ-1 ರವರಿಗೆ ಫೋನು ಮಾಡಿ ವಿಷಯ ತಿಳಿಸಿದ ಹೇಳಿಕೆ ನೀಡಿದ್ದು, ಚಾಸಾ-23 ರವರ ಹೇಳಿಕೆಯನ್ನು ನಿಪಿ-99 ಎಂದು ಗುರುತಿಸಲಾಯಿತು. ನಂತರ ಚಾಸಾ-26 ರವರನ್ನು ವಿಚಾರಣೆ ಮಾಡಿದಾಗ, ಆಕೆಯು "ತಾನು ರಾತ್ರಿ ಸುಮಾರು 10.45 ಗಂಟೆ ಸಮಯದಲ್ಲಿ ಮನೆಯಲ್ಲಿದ್ದಾಗ, ಚಾಸಾ-27 ರವರು ಕರೆ ಮಾಡಿ, ತನ್ನ ಮನೆಯ ಹತ್ತಿರ ಜಾನಕಿ ಬಂದು, ಬಾಗಿಲು ಬಡಿಯುತ್ತಿದ್ದಾಳೆ, ಬನ್ನಿ ಎಂದು ಹೇಳಿದ್ದು, ಅದರಂತೆ ತಾನು ಚಾಸಾ-27 ರವರ ಮನೆಯ ಬಳಿಗೆ ಹೋದಾಗ, ಅಲ್ಲಿ ಅವರ ಮನೆಯ ಲೈಟ್ ಬೆಳಕಿನಲ್ಲಿ ಜಾನಕಿ ಮನೆಯ ಹೊರಗೆ ನಿಂತಿರುವುದನ್ನು ನೋಡಿರುತ್ತೇನೆ ಹಾಗೂ ಆಕೆಯ ಎಡಗೈ ತುಂಡಾಗಿರುತ್ತದೆ ನಂತರ ನಾನು ಹೆದರಿ ಮನೆಗೆ ಬಂದಿರುತ್ತೇನೆ, ಅದಾದ ನಂತರ ಚಾಸಾ-24 ರವರು ನಮ್ಮ ಮನೆಗೆ ಬಂದಿದ್ದು, ಆಕೆಗೆ ನಾವು ಈಗಾಗಲೇ ಜಾನಕಿಯನ್ನು ನೋಡಿದ ವಿಷಯವನ್ನು ಹೇಳಿರುತ್ತೇವೆ, ಆನಂತರ ತಾನು ಚಾಸಾ-24 ಮತ್ತು 27 ರವರೊಂದಿಗೆ ಮೂವರೂ ಸೇರಿ ಜಾನಕಿಯ ಮನೆಯ ಬಳಿಗೆ ಹೋಗಿ, ಅಲ್ಲಿ ಅಶ್ವಿನಿಯ ಶವವನ್ನು ನೋಡಿರುತ್ತೇವೆ, ಹಾಗೂ ಮನೆಯ ಹಾಲ್ ನಲ್ಲಿ ಜಾನಕಿಯು ಕುಳಿತಿದ್ದನ್ನು ನೋಡಿರುತ್ತೇವೆ" ಎಂದು ಹೇಳಿಕೆ ನೀಡಿರುತ್ತಾಳೆ. ಚಾಸಾ-26 ರವರು ಈಗಾಗಲೇ ಮೃತಪಟ್ಟಿರುವ ಕಾರಣ, ಅವರ ಹೇಳಿಕೆಯನ್ನು ನಿಪಿ-100 ಎಂದು ಗುರುತಿಸಲಾಯಿತು.

2. ಮರಣೋತ್ತರ ಪರೀಕ್ಷೆಯ ನಂತರ ಮೃತದೇಹಗಳ ಬೆಂಗಾವಲಿಗಿದ್ದ ಸಿಬ್ಬಂದಿಗಳು ಮೃತದೇಹಗಳನ್ನು ಅವರ ವಾರಸುದಾರರಿಗೆ ಬಿಟ್ಟುಕೊಟ್ಟಿದ್ದು, ಅದರ ಬಗ್ಗೆ ರಶೀದಿಗಳನ್ನು ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ಸದರಿ ರಶೀದಿಗಳನ್ನು ಈಗಾಗಲೇ ನಿಪಿ-42, 43, 44 ಎಂದು, 64, 66, 69 ಎಂದು ಗುರುತಿಸಲಾಗಿದ್ದು, ಅದರ ಮೇಲಿರುವ ಸಾಕ್ಷಿಯ ಸಹಿಗಳನ್ನು ನಿಪಿ-64(ಎ), 66(ಎ) ಮತ್ತು 69(ಎ) ಎಂದು ಗುರುತಿಸಲಾಯಿತು. ಅಶ್ವಿನಿಯ ಮೈಮೇಲಿದ್ದ ಬಟ್ಟೆಗಳನ್ನು ಮರಣೋತ್ತರ ಪರೀಕ್ಷೆಯ ಕಾಲಕ್ಕೆ ವೈದ್ಯರು ಸಂಗ್ರಹಿಸಿದ್ದು, ನಮ್ಮ ಸಿಬ್ಬಂದಿಯಾದ ಚಾಸಾ-49 ರವರು ತಂದು ಹಾಜರುಪಡಿಸಿದ್ದು, ಚಾಸಾ-12 ಮತ್ತು 13 ರವರನ್ನು ಪಂಚರನ್ನಾಗಿ ಬರಮಾಡಿಕೊಂಡು, ಅವರ ಸಮಕ್ಷಮ ಸದರಿ ಬಟ್ಟೆಗಳನ್ನು ಸಂಜೆ 7.30 ರಿಂದ 8.00 ಗಂಟೆಯವರೆಗೆ ನಿಪಿ-21 ಪಂಚನಾಮೆಯಡಿಯಲ್ಲಿ ಜಪ್ತುಪಡಿಸಿಕೊಂಡಿರುತ್ತೇನೆ. ನಿಪಿ-21 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-21(ಡಿ) ಎಂದು ಗುರುತಿಸಲಾಯಿತು. ಚಾಸಾ-49 ರವರು ಅಶ್ವಿನಿಯ ಮೈಮೇಲಿದ್ದ ಹೊರ ಭಾಗದ ಫ್ರಾಕ್, ಒಳ ಫ್ರಾಕ್, ಚಡ್ಡಿ ಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಪರಿಶೀಲಿಸಲಾಗಿ ಅವುಗಳಿಗೆ ರಕ್ತ ತಾಗಿತ್ತು ಹಾಗೂ ಹೊರ ಭಾಗದ ಫ್ರಾಕನ್ನು ಮರಣೋತ್ತರ ಪರೀಕ್ಷಾ ಕಾಲಕ್ಕೆ ವೈದ್ಯರು ಹರಿದು ತೆಗೆದಿರುವುದು ಕಂಡುಬಂದಿರುತ್ತದೆ. ನಂತರ ಸದರಿ ಬಟ್ಟೆಗಳನ್ನು ಪ್ರತ್ಯೇಕ ಪೇಪರಿನಲ್ಲಿ ಸುತ್ತಿ, ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ 'M' ಅಕ್ಷರದ ಮೊಹರನ್ನು ಮಾಡಿ, ಅದರ ಮೇಲೆ ನಾನು ಹಾಗೂ ಪಂಚರು ಸಹಿ ಮಾಡಿರುತ್ತೇವೆ ಹಾಗೂ ಅದರ ಮೇಲೆ 3C1, 3C2, 3C3 ಎಂದು ಗುರುತಿಸಿ ಜಪ್ತುಪಡಿಸಿಕೊಂಡಿರುತ್ತೇನೆ, ಹೊರ ಭಾಗದ ಫ್ರಾಕ್, ಒಳ ಫ್ರಾಕ್, ಚಡ್ಡಿಗಳನ್ನು ಈಗಾಗಲೇ ಎಂ.ಓ-14, 15 ಮತ್ತು 16 ಎಂದು ಗುರುತಿಸಲಾಗಿದ್ದು, ಅವುಗಳ ಮೇಲಿರುವ ಸಾಕ್ಷಿಯ ಸಹಿಯನ್ನು ಎಂ.ಓ-14(ಸಿ), 15(ಬಿ) ಮತ್ತು 16(ಬಿ) ಎಂದು ಗುರುತಿಸಲಾಯಿತು.

3. ಅದೇ ದಿನ ಸತ್ಯನಾರಾಯಣ ಮೂರ್ತಿಯ ಮರಣೋತ್ತರ ಪರೀಕ್ಷೆಯ ಕಾಲದಲ್ಲಿ ಸಂಗ್ರಹಿಸಿದ ಬಟ್ಟೆಗಳನ್ನು ಚಾಸಾ-47 ರವರು ತಂದು ನನ್ನ ಮುಂದೆ ಹಾಜರುಪಡಿಸಿದ್ದು, ಚಾಸಾ-14 ಮತ್ತು 15 ರವರನ್ನು ಪಂಚರನ್ನಾಗಿ ಬರಮಾಡಿಕೊಂಡು, ಸದರಿಯವರ ಸಮಕ್ಷಮ ಸತ್ಯನಾರಾಯಣ ಮೂರ್ತಿಯ ಬಟ್ಟೆಗಳನ್ನು ರಾತ್ರಿ 8.15 ರಿಂದ 8.45 ಗಂಟೆಯವರೆಗೆ ನಿಪಿ-23 ರಂತೆ ಪಂಚನಾಮೆಯಡಿ ಜಪ್ತುಪಡಿಸಿಕೊಂಡಿರುತ್ತೇನೆ. ಸದರಿ ಪಂಚನಾಮೆಯಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-23(ಡಿ) ಎಂದು ಗುರುತಿಸಲಾಯಿತು. ಚಾಸಾ-47 ರವರು

ಸತ್ಯನಾರಾಯಣ ಮೂರ್ತಿಯ ತಿಳಿ ನೀಲಿ ಬಣ್ಣದ ಕಾಟನ್ ಚಡ್ಡಿ, ನೇರಳೆ ಬಣ್ಣದ ಕಾಟನ್ ಶರ್ಟನ್ನು ಹಾಜರುಪಡಿಸಿದ್ದು, ಅವುಗಳನ್ನು ಪರಿಶೀಲಿಸಲಾಗಿ, ಅವುಗಳಿಗೆ ರಕ್ತ ತಾಗಿತ್ತು ಮತ್ತು ಶರ್ಟಿನ ಎಡ ಕಾಲರ್ ಬಳಿ 9 ಸೆಂ.ಮೀ. ಉದ್ದ ಕತ್ತರಿಸಲಾಗಿತ್ತು. ನಂತರ ಸದರಿ ಬಟ್ಟೆಗಳನ್ನು ಪ್ರತ್ಯೇಕ ಪೇಪರಿನಲ್ಲಿ ಸುತ್ತಿ, ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ 'M' ಅಕ್ಷರದ ಮೊಹರನ್ನು ಮಾಡಿ, ಅದರ ಮೇಲೆ ನಾನು ಹಾಗೂ ಪಂಚರು ಸಹಿ ಮಾಡಿರುತ್ತೇವೆ ಹಾಗೂ ಅದರ ಮೇಲೆ 4D1, 4D2 ಎಂದು ಗುರುತಿಸಿ ಜಪ್ತುಪಡಿಸಿಕೊಂಡಿರುತ್ತೇನೆ. ಚಡ್ಡಿ ಹಾಗೂ ಶರ್ಟನ್ನು ಈಗಾಗಲೇ ಎಂ.ಓ-17 ಮತ್ತು 18 ಎಂದು ಗುರುತಿಸಲಾಗಿದ್ದು, ಅವುಗಳ ಮೇಲಿರುವ ಸಾಕ್ಷಿಯ ಸಹಿಯನ್ನು ಎಂ.ಓ-17(ಸಿ) ಮತ್ತು 18(ಸಿ) ಎಂದು ಗುರುತಿಸಲಾಯಿತು.

(ನ್ಯಾಯಾಲಯದ ಅವಧಿ ಮುಗಿದಿದ್ದರಿಂದ, ಮುಂದುವರೆದ ಮುಖ್ಯ ವಿಚಾರಣೆಗೆ ಹಾಗೂ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ.